




# ಮಾದಿಹಳ್ಳಿಯಲ್ಲಿ ರಾಮಕೃಷ್ಣ ಮಠದ ಹೊಸ ಶಾಖಾಕೇಂದ್ರ ಉದ್ಘಾಟನೆ

ಭಗವಾನ್ ಶ್ರೀರಾಮಕೃಷ್ಣರ ಹೆಸರಿನಲ್ಲಿ ಆರಂಭವಾದ ರಾಮಕೃಷ್ಣ ಮಹಾಸಂಘದ ಹೊಸ ಶಾಖಾಕೇಂದ್ರವು ತುಮಕೂರು ಜಿಲ್ಲೆಯ, ತುರುವೇಕೆರೆ ತಾಲೂಕಿನ ಮಾದಿಹಳ್ಳಿಯಲ್ಲಿ ಆರಂಭವಾಗಿದೆ. ಕರ್ನಾಟಕದಲ್ಲಿ ಇದು ರಾಮಕೃಷ್ಣ ಮಹಾಸಂಘದ ೯ ನೇ ಕೆಂದ್ರವಾಗಿದೆ. ಈ ಹಿಂದೆ 'ಬದರಿಕಾಶ್ರಮ' ಎಂಬ ಹೆಸರಿನಲ್ಲಿ ಆರಂಭವಾಗಿದ್ದ ಈ ಆಶ್ರಮವನ್ನು ಸ್ವಾಮಿ ಓಂಕಾರಾನಂದಜಿ ಮಹಾರಾಜ್ ಅವರು ವಿವಿಧ ಚಟುವಟಿಕೆಗಳೊಂದಿಗೆ ನಡೆಸುತ್ತ ಬಂದಿದ್ದರು; ಇತ್ತೀಚೆಗೆ ಆಶ್ರಮವನ್ನು ರಾಮಕೃಷ್ಣ ಮಠಕ್ಕೆ ಹಸ್ತಾಂತರಿಸಲಾಯಿತು.

೨೦೨೧ರ ಸೆಪ್ಟೆಂಬರ್ ೪ರಂದು ಮಾದಿಹಳ್ಳಿಯಲ್ಲಿ ರಾಮಕೃಷ್ಣ ಮಠದ ಉದ್ಘಾಟನೆಯನ್ನು ಒಂದು ಸಣ್ಣ ಕಾರ್ಯಕ್ರಮದೊಂದಿಗೆ ನಡೆಸಲಾಯಿತು. ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಬೋಧಸ್ವರೂಪಾನಂದ ಮಹಾರಾಜ್ ಅವರು ಮಾದಿಹಳ್ಳಿ ಆಶ್ರಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಉದ್ಘಾಟನಾ ಸಮಾರಂಭದಲ್ಲಿ ಸ್ವಾಮಿ ಓಂಕಾರಾನಂದಜಿಯವರಲ್ಲದೆ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ವಿವಿಧ ಸಂನ್ಯಾಸಿಗಳು ಪಾಲ್ಗೊಂಡಿದ್ದರು. ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಹಾಗೂ ಬೆಂಗಳೂರು, ಮೈಸೂರು, ಮಂಗಳೂರು ಹಾಗೂ ದಾವಣಗೆರೆ ರಾಮಕೃಷ್ಣ ಮಠಗಳ ಸಂನ್ಯಾಸಿಗಳು ಉಪಸ್ಥಿತರಿದ್ದರು. 'ಬದರಿಕಾಶ್ರಮ'ದ ವಿವಿಧ ಟ್ರಸ್ಟಿಗಳ ಹಾಗೂ ಸ್ಥಳೀಯ ಭಕ್ತರುಗಳು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗ್ರಾಮೀಣ ಪರಿಸರವಾದ ಮಾದಿಹಳ್ಳಿಯಲ್ಲಿ ಆಶ್ರಮವು ಸಿ.ಬಿ.ಎಸ್.ಸಿ. ಶಾಲೆಯೊಂದನ್ನು ನಡೆಸುತ್ತಿದೆ. ಇದರಲ್ಲಿ ಕಿಂಡರ್ ಗಾರ್ಟನ್‌ನಿಂದ ೧೦ನೇ ತರಗತಿಯವರೆಗೆ ಕಲಿಸಲಾಗುತ್ತಿದೆ. ಆಶ್ರಮದಲ್ಲಿ ದೇವಾಲಯ, ಅಡುಗೆ ಮನೆ, ಭೋಜನಾಲಯ, ಗೋಶಾಲೆ, ಅತಿಥಿಗೃಹ, ಅಧ್ಯಾಪಕರ ನಿವಾಸ, ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ — ಇವುಗಳೊಂದಿಗೆ ತೆಂಗಿನ ತೋಟ, ಮಾವಿನ ತೋಟಗಳೂ ಇವೆ.

ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ನಡೆಸಲು ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಆರಂಭಿಸಲು ರಾಮಕೃಷ್ಣ ಮಠದ ಒಂದು ಶಾಖೆಯು ಉತ್ತಮ ಪರಿಸರದಲ್ಲಿ ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ಈ ಪ್ರದೇಶದ ಅಭಿವೃದ್ಧಿಗೆ ಆಶ್ರಮವು ವಿಶೇಷವಾಗಿ ಶ್ರಮಿಸುವುದೆಂದು ನಿರೀಕ್ಷಿಸಬಹುದಾಗಿದೆ.





Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020